(ಭಾವಚಿತ್ರಗಳ ಸಂಗ್ರಹ) ಅನುಬಂಧ -

6. ಆಯಾ ಜಿಲ್ಲೆಗಳ ಸ್ಥಳೀಯ ಹಿರಿಯರೊಂದಿಗೆ ಸಂಘ ಸಂಸ್ಥೆಗಳೊಂದಿಗೆ ಚರ್ಚಿಸಿ ವಿಷಯ ಸಂಗ್ರಹ
7. ಗ್ರಂಥಾಲಯ, ವಾಚನಾಲಯ, ಕನ್ನಡ ಸಂಘಗಳ ಕುರಿತಂತೆಈಗಾಗಲೇ ದಾಖಲಾಗಿರುವ ಗ್ರಂಥಗಳ ಖರೀದಿ, ಅಧ್ಯಯನ ಮಾಹಿತಿ ಸಂಗ್ರಹ.
8. ಈ ವಿಷಯದ ಕುರಿತು ಪತ್ರಿಕೆಯಲ್ಲಿ ಬಂದ ಮಾಹಿತಿಗಳ ಶೇಖರಣೆ ( ಅನುಬಂಧ - ಪತ್ರಿಕಾ ಮಾಹಿತಿ)
9. ಆಯಾ ಸಂಘಗಳು ಪ್ರಕಟಿಸಿರುವ ಪುಸ್ತಕ, ಮ್ಯಾಗಜಿನ್, ಸ್ಮರಣ ಸಂಚಿಕೆಗಳ ಸಂಗ್ರಹ- ಅಧ್ಯಯನ- ಲಭ್ಯ ಮಾಹಿತಿಯ ಟಿಪ್ಪಣಿ.
10. ಕ್ಷೇತ್ರ ಕಾರ್ಯ- ವಿಷಯ ಸಂಗ್ರಹ ಕಾರ್ಯ ಪೂರ್ಣಗೊಂಡ ನಂತರ ಕಿರು ಸಂಶೋಧನೆ ಪ್ರಬಂಧ ರಚನೆ

**ಕಿರು ಸಂಶೋಧನೆ ಪ್ರಬಂಧ - ವಿಷಯ ಪ್ರವೇಶ**

**ಅ. ಪ್ರಾದೇಶಿಕ ಇತಿಹಾಸ**

**ಹೈದ್ರಾಬಾದ ಕರ್ನಾಟಕ - ಹೆಸರು ಹೇಗೆ ?**

ಸ್ವಾತಂತ್ರ್ಯ ಪೂರ್ವದಲ್ಲಿ ಅಂದರೆ ಕರ್ನಾಟಕ ರಾಜ್ಯ ಹುಟ್ಟುವದಕ್ಕೂ ಪೂರ್ವದಲ್ಲಿ - ಈಗಿರುವ ಕನ್ನಡ ನಾಡು ಹಲವು ಭಾಗಗಳಲ್ಲಿ ಹಂಚಿ ಹೋಗಿತ್ತು.

**ಮದ್ರಾಸ್ ಪ್ರಾಂತ :**

ದಕ್ಷಿಣ ಕನ್ನಡ, ಬಳ್ಳಾರಿ, ಕೊಳ್ಳೇಗಾಲ , ಹೊಸೂರ, ಮಡಕಶಿರಾ - ಭಾಗ

**ಮುಂಬೈ ಪ್ರಾಂತ :**

ಉತ್ತರ ಕನ್ನಡ, ಬೆಳಗಾವಿ, ಧಾರವಾಡ, ಸೊಲ್ಲಾಪುರ, ಮಂಗಳವೇಢ

**ಹೈದ್ರಾಬಾದ ಪ್ರಾಂತ :**

ಬೀದರ,ಗುಲಬರ್ಗಾ, ರಾಯಚೂರು ಜಿಲ್ಲೆಗಳು

ಈ ಮುಖ್ಯ ಪ್ರಾಂತಗಳಲ್ಲದೆ ಕೊಡಗು, ಕೊಲ್ಹಾಪುರ ಸಂಸ್ಥಾನ, ಸಾಂಗಲಿ ಸಂಸ್ಥಾನ, ಮಿರಜ್, ಕುಂದರವಾಡ, ಜಮಖಂಡಿ, ಅಕ್ಕಲಕೋಟ, ರಾಮದುರ್ಗ, ಸೊಂಡೂರು, ಆನೆಗೊಂದಿ, ಸವಣೂರು - ಹೀಗೆ ಆಯಾ ಭಾಗದ ಆಡಳಿತದ ಸಂಸ್ಥಾನಗಳ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಛಿದ್ರ, ಛಿದ್ರವಾಗಿತ್ತು. ಸಂಸ್ಥಾನದ ಆಳ್ವಿಕೆಯಿಂದ ಆಯಾ ಪ್ರದೇಶಗಳು ಗುರುತಿಸಲ್ಪಡುತ್ತಿದ್ದವು. 1947 ಆಗಸ್ಟ 15ರಂದು ಭಾರತ ದೇಶದ ಸ್ವಾತಂತ್ರ್ಯ ನಂತರ ಈ ಪ್ರಾಂತಗಳು ಸಂಸ್ಥಾನಗಳ ಆಡಳಿತಗಳಿಂದ ಹೊರಬಂದವು. ಆದರೆ ಹೈದ್ರಾಬಾದ